**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಸರ್ಕಾರದ ಇತರೆ ಇಲಾಖೆಗಳಲ್ಲಿ ನೇಮಕಾತಿ ಹೊಂದಿ ನಂತರದಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರನ್ವಯ ಜಿಲ್ಲಾ ಪಂಚಾಯಿತಿಗಳಲ್ಲಿ ವಿಲೀನಗೊಂಡು ಕಾರ್ಯ ನಿರ್ವಹಿಸುತ್ತಿರುವ / ನಿವೃತ್ತರಾಗಿರುವ ನೌಕರರುಗಳಿಗೆ ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವ ಬಗ್ಗೆ.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 260 ಕೆಎಸ್‌ಎಸ್ 2007 ದಿನಾಂಕ: 05.01.2009.

****

**ಪ್ರಸ್ತಾವನೆ:**

ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 16(a)(ii)ರ ಅನುಸಾರ ಸರ್ಕಾರದ ಒಂದು ಇಲಾಖೆಯಲ್ಲಿ ನಿಯಮಾನುಸಾರ ನೇಮಕಾತಿ ಹೊಂದಿದ ನೌಕರರನ್ನು ಸರ್ಕಾರದ ಇತರೆ ಇಲಾಖೆಗಳಲ್ಲಿ ಸಮಾನಾಂತರ ದರ್ಜೆಯ ಹುದ್ದೆಗಳಲ್ಲಿ ಶಾಶ್ವತವಾಗಿ ವರ್ಗಾವಣೆ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ. ಈ ರೀತಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೇಮಕಾತಿ ಹೊಂದಿದ ನೌಕರರು ನಂತರದಲ್ಲಿ ಜಿಲ್ಲಾ ಪಂಚಾಯಿತಿಗಳಲ್ಲಿ ಮೇಲೆ ಉಲ್ಲೇಖಿಸಿರುವ ನಿಯಮದ ಅನುಸಾರ ಶಾಶ್ವತವಾಗಿ ವರ್ಗಾವಣೆಗೊಂಡು ಕೆಲಸ ನಿರ್ವಹಿಸುತ್ತಿದ್ದಾರೆ. ಈ ರೀತಿ ಜಿಲ್ಲಾ ಪಂಚಾಯಿತಿಗಳಲ್ಲಿ ಶಾಶ್ವತವಾಗಿ ವರ್ಗಾವಣೆಗೊಂಡು ಮುಂದುವರೆದ ನಂತರ ಸದರಿ ನೌಕರರನ್ನು ಸ್ಥಳೀಯ ಸಂಸ್ಥೆಗಳ ನೌಕರರೆಂದು ಪರಿಗಣಿಸಿ ಸದರಿಯವರುಗಳಿಗೆ ಮೇಲೆ ಓದಲಾದ ಸರ್ಕಾರದ ದಿನಾಂಕ: 05.01.2009 ರ ಆದೇಶದ ಅನುಸಾರ ನಿವೃತ್ತಿ ಉಪದಾನದ ಸೌಲಭ್ಯವನ್ನು ಮಂಜೂರು ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.

ಸದರಿ ನೌಕರರು ತಾವುಗಳು ಈ ಹಿಂದೆ ಮೂಲತಃ ಸರ್ಕಾರದ ಇಲಾಖೆಗಳಲ್ಲಿ ನೇಮಕಾತಿ ಹೊಂದಿರುವ ಕಾರಣ ಒಂದು ವೇಳೆ ಸದರಿ ಇಲಾಖೆಗಳಲ್ಲಿಯೇ ತಾವು ಮುಂದುವರೆದಿದ್ದಲ್ಲಿ ಸರ್ಕಾರದ ನಿಯಮಗಳ ಅನುಸಾರ ತಾವು ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳಿಗೆ ಅರ್ಹರಾಗುತ್ತಿದ್ದ ಕಾರಣ ತಮಗೂ ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಲು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ.

ಈ ಕುರಿತಂತೆ ಪರಿಶೀಲಿಸಲಾಗಿ, ಈ ಹಿಂದೆ ಸರ್ಕಾರದ ಇಲಾಖೆಗಳಲ್ಲಿ ನಿಯಮಾನುಸಾರ ನೇಮಕಾತಿ ಹೊಂದಿ ಕೆಲಸ ನಿರ್ವಹಿಸುತ್ತಿದ್ದ ಕೆಲವು ನೌಕರರು ನಂತರದಲ್ಲಿ ಕೆಲವೊಂದು ಕಾರಣಗಳಾಗಿ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 16(a)(ii)ರ ಅನುಸಾರ ಜಿಲ್ಲಾ ಪಂಚಾಯಿತಿಗಳಲ್ಲಿ ಶಾಶ್ವತವಾಗಿ ವರ್ಗಾವಣೆಗೊಂಡು ಮುಂದುವರೆದಿರುತ್ತಾರೆ. ಒಂದು ವೇಳೆ ಸದರಿ ನೌಕರರು ನೇಮಕಾತಿ ಹೊಂದಿದ ಇಲಾಖೆಗಳಲ್ಲಿಯೇ ಮುಂದುವರೆದಿದ್ದಲ್ಲಿ, ವಯೋನಿವೃತ್ತಿ / ನಿಧನದ ಸಂದರ್ಭಗಳಲ್ಲಿ ಸದರಿಯವರುಗಳು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಅನುಸಾರ ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳಿಗೆ ಅರ್ಹರಾಗುತ್ತಿದ್ದರು.

ಆದ್ದರಿಂದ ಸರ್ಕಾರದ ಇತರೆ ಇಲಾಖೆಗಳಲ್ಲಿ ನಿಯಮಾನುಸಾರ ನೇಮಕಾತಿ ಹೊಂದಿ ನಂತರದಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರನ್ವಯ ಜಿಲ್ಲಾ

ಪಂಚಾಯಿತಿಗಳಲ್ಲಿ ದಿನಾಂಕ: 01.04.1987 ರಿಂದ ಈವರೆಗಿನ ಅವಧಿಯಲ್ಲಿ ವಿಲೀನಗೊಂಡು ಕಾರ್ಯ ನಿರ್ವಹಿಸುತ್ತಿರುವ / ನಿವೃತ್ತರಾದ 22 ನೌಕರರುಗಳು ಜಿಲ್ಲಾ ಪಂಚಾಯಿತಿಯಲ್ಲಿ ಕಳೆದ ಅವಧಿಯನ್ನು 'ಸರ್ಕಾರಿ ಸೇವೆ' ಎಂದು ಪರಿಗಣಿಸಿ ಅವರುಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳನುಸಾರ ಪಿಂಚಣಿ ಮತ್ತು ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 205 ಸೇಶಿಕಾ 2014(2),**
**ಬೆಂಗಳೂರು ದಿನಾಂಕ:15.3.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಸರ್ಕಾರವು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿನ ಸೇವೆಯಲ್ಲಿರುವ / ನಿವೃತ್ತರಾದ / ಮೃತರಾದ 22 ನೌಕರರುಗಳಿಗೆ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಅವರುಗಳು ಜಿಲ್ಲಾ ಪಂಚಾಯಿತಿಯಲ್ಲಿ ಕಳೆದ ಅವಧಿಯನ್ನು **'ನಿಯೋಜನೆ ಮೇಲೆ ಕಳೆದ ಸರ್ಕಾರಿ ಸೇವೆ'** ಎಂದು ಪರಿಗಣಿಸಿ ಸದರಿಯವರುಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ಅನುಸಾರ ಪಿಂಚಣಿ ಮರಣ ಹಾಗೂ ನಿವೃತ್ತಿ ಉಪದಾನ (ಡಿ.ಸಿ.ಆರ್.ಜಿ) ಪಡೆಯಲು ಅರ್ಹರಾಗುತ್ತಾರೆಂದು ಆದೇಶಿಸಿದೆ.

1. ದಿನಾಂಕ: 01.04.2006ರ ಪೂರ್ವದಲ್ಲಿ ನೇಮಕಾತಿ ಹೊಂದಿದವರು ಮಾತ್ರ ಅರ್ಹರಾಗುತ್ತಾರೆ.
2. ಸದರಿಯವರು ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರನ್ವಯ ಜಿಲ್ಲಾ ಪಂಚಾಯಿತಿಗಳಲ್ಲಿ ವಿಲೀನಗೊಂಡು ಕೆಲಸ ನಿರ್ವಹಿಸಿದ ಅವಧಿಯನ್ನು ನಿಯೋಜನೆ ಮೇಲಿನ ಅವಧಿ ಎಂದು ಪರಿಗಣಿಸಿ ಪಿಂಚಣಿ / ನಿವೃತ್ತಿ ಉಪದಾನಕ್ಕೆ ಅರ್ಹತಾ ಸೇವೆ ಎಂದು ಪರಿಗಣಿಸುವುದು.
3. ಇವರುಗಳು ಅಂದರೆ ಪ್ರಸ್ತುತ ಸೇವೆಯಲ್ಲಿರುವವರು ಅವರುಗಳು ಹಾಲಿ ಕೆಲಸ ನಿರ್ವಹಿಸುತ್ತಿರುವ ಹುದ್ದೆಗಳಲ್ಲಿಯೇ ವಯೋನಿವೃತ್ತಿಯವರೆವಿಗೂ ಮುಂದುವರೆಯತಕ್ಕದ್ದು.
4. ನಿವೃತ್ತ /ಮೃತ ನೌಕರರಿಗೂ ಸಹ ಈ ಸೌಲಭ್ಯ ಅನ್ವಯವಾಗುತ್ತವೆ.

**ಈ ಆದೇಶವು ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977ರ 17ನೇ ನಿಯಮದ (2)ನೇ ಉಪನಿಯಮದ ಪರಂತುಕದ ವ್ಯಾಪ್ತಿಯೊಳಗೆ ಬರುತ್ತದೆ ಮತ್ತು ಅದರಂತೆ ಹೊರಡಿಸಲಾಗಿದೆ.**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

15/03/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು- ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ ಅದರ 200 ಪ್ರತಿಗಳನ್ನು ಕಳುಹಿಸಿಕೊಡುವಂತೆ ಈ ಮೂಲಕ ಕೋರಿದೆ.

ಪ್ರತಿ:

1. ಮಹಾಲೇಖಪಾಲರು (ಎ&ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.

3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು.
4. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ,
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು.
7. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
8. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಕೆ.ಆರ್.ವೃತ್ತ, ಬೆಂಗಳೂರು.
9. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
10. ಸರ್ಕಾರದ ಜಂಟಿ ಕಾರ್ಯದರ್ಶಿ (ಆಡಳಿತ) / ಉಪ ಕಾರ್ಯದರ್ಶಿ (ಆಡಳಿತ), ಗ್ರಾ.ಅ.ಪಂ.ರಾಜ್ ಇಲಾಖೆ.
11. ಸಚಿವ ಸಂಪುಟ ಶಾಖೆ. .(ಉಲ್ಲೇಖ: ವಿಷಯ ಸಂಖ್ಯೆ: ಸಿ 145/2017 ದಿನಾಂಕ: 22.02.2017 ರಂದು ಅನುಮೋದಿಸಿರುವಂತೆ).
12. ಮೇಲ್ವಿಚಾರಕರು, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ- ವೆಬ್ ಸೈಟ್ ನಲ್ಲಿ ಪ್ರಕಟಿಸಲು.
13. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

## ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 205 ಸೇಶಿಕಾ 2014 (2), ದಿನಾಂಕ: 15.3.2017ಕ್ಕೆ ಅನುಬಂಧ

| ಜಿಲ್ಲೆಯ ಹೆಸರು | ಒಟ್ಟಾರೆ ಕ್ರಸಂ. | ಕ್ರಸಂ | ಅಧಿಕಾರಿ/ ನೌಕರರ ಹೆಸರು | ಸಕ್ರಮಾತಿಗೊಂಡ ಹುದ್ದೆ | ಪ್ರಸ್ತುತ ಪದನಾಮ | ಪ್ರಸ್ತುತ ವೇತನ ಶ್ರೇಣಿ |
|---|---|---|---|---|---|---|
| 1 | 2 | 3 | 4 | 5 | 6 | 7 |
| ಬೆಂಗಳೂರು ನಗರ | 1 | 1 | ಕೆ.ರಮೇಶ | ದ್ವಿ.ದ.ಸ. | ಅಧೀಕ್ಷಕರು | 20000-36300 |
| ದಾವಣಗೆರೆ | 2 | 2 | ಹೆಚ್.ವಿ.ಗೋವಿಂದರಾಜು | ಅಡುಗೆ ಸಹಾಯಕ | ದ್ವಿ.ದ.ಸ | 11600-21000 |
| | 3 | 3 | ಎಂ.ಬಿ.ಮಂಜುನಾಥ | ಅಡುಗೆ ಸಹಾಯಕ | ದ್ವಿ.ದ.ಸ | 11600-21000 |
| | 4 | 4 | ಬಿ.ಆರ್.ವಿಶ್ವನಾಥ | ಅಡುಗೆ ಸಹಾಯಕ | ದ್ವಿ.ದ.ಸ | 11600-21000 |
| | 5 | 5 | ಎನ್.ಮಂಜಾಬೋವಿ | ಅಡುಗೆಯವರು | ಗ್ರೂಪ್-ಡಿ | 5800-10500 |
| ದಕ್ಷಿಣ ಕನ್ನಡ | 6 | 1 | ಸುವರ್ಣ ಜಿ.ಹೆಗಡೆ | ಗ್ರಾ.ಪಂ. ಕಾರ್ಯದರ್ಶಿ ಗ್ರೇಡ್-2 | ಪ್ರ.ದ.ಸ. | 14550-26700 |
| ಧಾರವಾಡ | 7 | 1 | ಶ್ರೀಮತಿ ಎಲ್.ಕೆ ಕುಲಕರ್ಣಿ | ಗ್ರೇಡ್-1 ಕಾರ್ಯದರ್ಶಿ | ಪ್ರ.ದ.ಸ | 14550-26700 |
| | 8 | 2 | ಶ್ರೀಮತಿ ಪಿ.ಎಸ್ ನಾಡಗೇರ | ಗ್ರೇಡ್-1 ಕಾರ್ಯದರ್ಶಿ | ಪ್ರ.ದ.ಸ | 14550-26700 |
| | 9 | 3 | ಶ್ರೀಮತಿ ಜೆ.ಡಿ.ಎಸ್ ದೀಕ್ಷಿತ | ಗ್ರೇಡ್-2 ಕಾರ್ಯದರ್ಶಿ | ದ್ವಿ.ದ.ಸ | 11600-21000 |
| | 10 | 4 | ಶ್ರೀಮತಿ ಪಿ.ಎಚ್.ಹೊಸಕೋಟೆ | ಗ್ರೇಡ್-2 ಕಾರ್ಯದರ್ಶಿ | ದ್ವಿ.ದ.ಸ | 11600-21000 |
| | 11 | 5 | ಶ್ರೀ ಕೆ.ಜಿ ದೇಶಪಾಂಡೆ | ಗ್ರೇಡ್-2 ಕಾರ್ಯದರ್ಶಿ | ದ್ವಿ.ದ.ಸ | 11600-21000 |
| ಹಾವೇರಿ | 12 | 1 | ಬಿ. ಎಫ್. ಚಿಕ್ಕಮಠ | ದ್ವಿ.ದ.ಸ | ಅಧೀಕ್ಷಕರು | 20000-36300 |
| ಕೋಲಾರ | 13 | 1 | ಕೆ.ವೇಣುಗೋಪಾಲ್ | ವಾಹನ ಚಾಲಕರು | ವಾಹನ ಚಾಲಕರು | 11600-21000 |
| ಕಲಬುರಗಿ | 14 | 1 | ಜನಾರ್ಧನ ಹೇಮನೂರ | ವ್ಯವಸ್ಥಾಪಕರು | ವ್ಯವಸ್ಥಾಪಕರು | 20000-36300 |
| ಮಂಡ್ಯ | 15 | 1 | ಮುನೇಂದ್ರಕುಮಾರ್ ಹೆಚ್.ಎಲ್. | ದ್ವಿ.ದ.ಸ | ಪ್ರ.ದ.ಸ | 14550-26700 |
| | 16 | 2 | ಹೆಚ್.ಕೆ.ಬೊಮ್ಮೆಗೌಡ | ಗ್ರೂಪ್-ಡಿ | ಗ್ರೂಪ್-ಡಿ | 9600-14550 |
| ಮೈಸೂರು | 17 | 1 | ಶಾನವಾಜ್ | ಶೀಘ್ರಲಿಪಿಗಾರರು | ಶೀಘ್ರಲಿಪಿಗಾರರು | 17650-32000 |
| ರಾಯಚೂರು | 18 | 1 | ಮಜಹರ್ ಇಕ್ಬಾಲ | ಪ್ರ.ದ.ಸ. | - | 7275-13350 |
| | 19 | 2 | ಗೀತಾ ಚಳಗೇರಿ | ಗ್ರಾಮ ಸೇವಿಕಾ | ಪ್ರ.ದ.ಸ. | 14550-26700 |
| ತುಮಕೂರು | 20 | 1 | ಎಸ್.ಬೋರೇಗೌಡ | ದ್ವಿ.ದ.ಸ. | ವ್ಯವಸ್ಥಾಪಕರು | 20000- 36300 |
| | 21 | 2 | ಶ್ರೀನಿವಾಸ ಕೃಷ್ಣಪ್ಪ | ಬೆರಳಚ್ಚುಗಾರರು | ವ್ಯವಸ್ಥಾಪಕರು | 20000-36300 |
| ವಿಜಯಪುರ | 22 | 1 | ಶ್ರೀ.ಎಂ.ಎ.ಕಲಬುರ್ಗಿ | ಪ್ರ.ದ.ಸ. | ಅಧೀಕ್ಷಕರು | 20000-36300 |

(ಎಸ್. ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
(ಸೇವೆಗಳು-ಎ)